**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>**

ಸಿ.ಸಿ. ನಂ. 211/2023.

ಸಿ.ಡಬ್ಲೂಃ 4 ಪಿ.ಡಬ್ಲೂಃ 1

ಹೆಸರುಃ ಸುರ್ವಣ ಬಿ ಕೋಟೆ

ಗಂಡನ ಹೆಸರುಃ ನಿಂಗಪ್ಪ

ವಯಸ್ಸುಃ 42 ವರ್ಷ

ಉದ್ಯೋಗಃ ಅಬಕಾರಿ ನಿರೀಕ್ಷಕರು ಮುಂಡರಗಿ

ವಿಳಾಸಃ ಮುಂಡರಗಿ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ24/12/2024 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ</u>**

**1.** ನಾನು ಅಬಕಾರಿ ನೀರಿಕ್ಷಕರಾಗಿ ಮುಂಡರಗಿ ವಲಯ ಕಚೇರಿಯಲ್ಲಿ ಫೆಬ್ರವರಿ 2022 ರಿಂದ ಇಲ್ಲಿವರೆಗೆ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ದಿಃ24-11-2022 ರಂದು ಅಬಕಾರಿ ಅಕ್ರಮಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ಮಾನ್ಯ ಅಬಕಾರಿ ಉಪ ಆಯುಕ್ತರು ಗದಗದ ಜಿಲ್ಲೆ ಗದಗ ರವರ ಮಾರ್ಗದರ್ಶನದಲ್ಲಿ ಮತ್ತು ಮಾನ್ಯ ಅಬಕಾರಿ ಉಪ ಅಧೀಕ್ಷಕರು ಗದಗ ಉಪವಿಭಾಗ ರವರ ನೇತೃತ್ವದಲ್ಲಿ ಪರಶುರಾಮ ಹೆಚ್ ವಡ್ಡರ, ಅಬಕಾರಿ ನೀರಿಕ್ಷಕರು ಗದಗ ಉಪವಿಭಾಗ ಇವರೊಂದಿಗೆ ನಾನು ಹಾಗೂ ಗುರುರಾಜ್ ಎಸ್ ವಸ್ತದ, ಅಬಕಾರಿ ಪೇದೆ ಮತ್ತು ಶಹರಾಜ್ ವಾಹನ ಚಾಲಕರು ಗದಗ ಉಪವಿಭಾಗ ಹಾಗೂ ಇಬ್ಬರು ಪಂಚರಾದ ಚಾಸಾ 2 ಮತ್ತು 3 ಸೇರಿಕೊಂಡು ಸರಕಾರಿ ವಾಹನ ಸಂಖ್ಯೆ ಕೆಎ-01 ಜಿ 5784 ನೇದ್ದರಲ್ಲಿ ಬೆಳ್ಳಿಗೆ 10.00 ಗಂಟೆಗೆ ಗಜೇಂದ್ರಗಡ ತಾಲೂಕಿನ ದಿಂಡೂರು ಗ್ರಾಮದಲ್ಲಿ ಗಸ್ತು ಕಾರ್ಯ ನಡೆಸುತ್ತಿರುವಾಗ ಗಜೇಂದ್ರಗಡ ತಾಲೂಕಿನ ದಿಂಡೂರು ತಾಂಡಾದಲ್ಲಿನ ಸೇವಾಲಾಲ ದೇವಸ್ಥಾನ ಹಿಂಭಾಗದಲ್ಲಿರುವ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಂಗ್ರಹಿಸಿಟ್ಟಿರುತ್ತಾರೆ ಎಂಬ ಮಾಹಿತಿ ದೊರೆತಿದ್ದು ಇರುತ್ತದೆ. ಪಂಚರನ್ನು ದಿಂಡೂರು ಗ್ರಾಮದಲಲ್ ಲಕ್ಕಲಕಟ್ಟಿ ಕ್ರಾಸ ಹತ್ತಿರ ಕರೆದುಕೊಂಡಿರುತ್ತೇವೆ.

2. ಅದರಂತೆ ಕಾರ್ಯೋನ್ಮುಖವಾಗಿ ಗಜೇಂದ್ರಗಡ ತಲೂಕಿನ ದಿಂಡೂರು ತಾಂಡಾ ತಲುಪಿ , ಸರಕಾರಿ ವಾಹನವನ್ನು ತಾಂಡಾದ ಹೊರವಲಯ ರಸ್ತೆಯ ಪಕ್ಕದಲ್ಲಿ ಮರೆಯಲ್ಲಿ ನಿಲ್ಲಿಸಿ ಕಾಲ್ನಗಡೆಯಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಹೋಗುತ್ತಿದ್ದಂತೆ ಅಲ್ಲಿ ಯಾರೋ ಜೋರಾಗಿ ಪೊಲೀಸರು ಬಂದರು ಎಂದು ಕೂಗಿದರು ನಾವು ಅವಸರಾಗಿ ಸದರಿ ಮಾಹಿತಿ ಇದ್ದ ಮನೆಯ ಹತ್ತಿರ ಹೋಗುತ್ತಿದ್ದಂತೆ ಸದರಿ ಮನೆಯ ಒಳಗಿರುವ ಒಬ್ಬ ಮಹಿಳೆಯು ಸಮವಸ್ತ್ರದಲ್ಲಿ ನಮ್ಮನ್ನು ನೋಡಿ ಗಾಬರಿಯಾಗಿ ಓಡಲು ಪ್ರಯತ್ನಿಸುತ್ತಿರುವಾಗ ತೊದಲುತ್ತಾ ತನ್ನ ಹೆಸರು ಶಂಕ್ರವ್ವ ಗಂಡ ರಮೇಶ ರಾಠೋಡ ಎಂದು ತಿಳಿಸಿದರು.

3. ನಂತರ ಅಧಿಕಾರಿಗಳು ಮನೆಯನ್ನು ತಪಾಸಣೆ ಮಾಡುತ್ತೇವೆ ಅದ್ದರಿಂದ ನಿಮ್ಮಲ್ಲಿ ಯಾರಾದರೂ ಪಂಚರಾಗಿ ಎಂದು ಅಲ್ಲಿ ನೆರೆದಿದ್ದ ಸಾರ್ವಜನಿಕರಿಗೆ ಕೇಳಲಾಗಿ ಆಗ ಯಾರೂ ಸಹಕರಿಸದ ಕಾರಣ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 54 ರನ್ವಯ ಪ್ರಕರಣಾಧೀನ ದತ್ತವಾದ ಅಧಿಕಾರದ ಮೇರೆಗೆ ಶೋಧನಾ ಸಮುಚಿತ ಆಧಾರವನ್ನು ಸ್ಥಳದಲ್ಲಿಯೇ ತಯಾರಿಸಿಕೊಂಡು ಸದರಿ ಮನೆಯನ್ನು ಶೋಧನೆ ಮಾಡಲು ಪ್ರಾರಂಭಿಸಲಾಯಿತು. ಆಗ ಸಮಯ ಬೆಃ 10.20 ಗಂಟೆ ಆಗಿತ್ತು. ಸದರಿ ಮನೆಯನ್ನು ಪರಿಶೀಲಿಸಲಾಗಿ ದಕ್ಷಿಣಾಭಿಮುಖವಾಗಿದ್ದು ಹಾಲ್ ಮತ್ತು ಅಡುಗೆಕೋಣೆ ಒಳಗೊಂಡಿರುತ್ತದೆ. ಹಾಲ್ ಪ್ರವೇಶಿಸಿದಾಗ ಹಾಲ್ ನಲ್ಲಿರುವ ಇರುವ ಟೇಬಲ್ ಕೆಳಗೆ ಎರಡು ಲೀಟರ ಸಾಮರ್ಥ್ಯದ 01 ಪ್ಲಾಸ್ಟಿಕ ಬಾಟಲಿಯಿದ್ದು, ಅನುಮಾನದಿಂದ ಬಾಟಲಿಯನ್ನು ತೆಗೆದು ನೋಡಿದಾಗ ಅದರಲ್ಲಿ ಉಗ್ರ ಘಾಟು ವಾಸನೆ ಬಂದಿತ್ತು. ಅದು ಕಳ್ಳಭಟ್ಟಿ ಸಾರಾಯಿ ಎಂದು ಖಚಿತಪಡಿಸಲಾಯಿತು. ಅಂದಾಜು 1.5 ಲೀ. ಕಳ್ಳಭಟ್ಟಿ ಸರಾಯಿ ಇತ್ತು. ಆಗ ಸಮಯ ಬೆಃ 10.30 ಗಂಟೆ ಆಗಿತ್ತು. ಸದರಿ ಪ್ಲಾಸ್ಟಿಕ ಬಾಟಲಿಯನ್ನು ಪಂಚರ ಸಮಕ್ಷಮ ಜಪ್ತು ಪಡಿಸಲಾಯಿತು. ನಮಗೆ ಬಂದ ಮಾಹಿತಿ ಅನ್ವಯ ಸದರಿ ಮನೆಯಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸರಾಯಿಯನ್ನು ಸಂಗ್ರಹಿಸಿಟ್ಟಿರುವುದು ಖಚಿತವಾಯಿತು. ಸದರಿ ಕೃತ್ಯವು ಕರ್ನಾಟಕ ಅಬಕಾ ಕಾಯ್ದೆ 1965 ರ ಕಲಂ 13.14 ರ ಉಲ್ಲಂಘನೆಯಾಗಿದ್ದು ಕಲಂ 32(1)ದ 38(ಎ) ಮತ್ತು 43 ರ ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿದ್ದು ಇದೆ ಅಂತಾ ಪಂಚರಿಗೆ ತಿಳಿಸಲಾಯಿತು. ಸದರಿ ಆರೋಪಿತಳನ್ನು ದಸ್ತಗಿರಗೊಳಿಸಲಾಯಿತು.

4. ನಂತರ ಮುದ್ದೆ ಮಾಲನ್ನು ಜಪ್ತು ಮಾಡಿಕೊಂಡು ಸದರಿ ಜಪ್ತು ಮಾಡಿದ ಕಳ್ಳಭಟ್ಟಿ ಸರಾಯಿಯನ್ನು ಅದೇ ಬಾಟಲಿಯಲ್ಲಿ ರಸಾಯನಿಕ ಪರೀಕ್ಷೆಗೆ ಶ್ಯಾಂಪಲ್ ತೆಗೆದಿದೆ. ಮುದ್ದೆ ಮಾಲು ಹಾಗೂ ರಸಾಯನಿಕ ಪರೀಕ್ಷೆಗೆ ತೆಗೆದ ಬಾಟಲ್ಗೆ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಸರಕಾರಿ ಸೀಲಿನಿಂದ ಸೀಲ್ ಮಾಡಲಾಯಿತು. ಚಾಸಾ 1 ಕೊಟ್ಟ ದೂರನ್ನು ಅದನ್ನು ನಿಪಿಃ 1 ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಗುರುರಾಜ್ ವಸ್ತ್ರದ ಇವರು ಬರೆದರು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಒಂದು ಲೀಟರನ ಶ್ಯಾಂಪಲ್ ಕಳ್ಳಭಟ್ಟಿಯನ್ನು ಶೇಖರಿಸಿದ ಬಾಟಲಿಯನ್ನು ಈಗ ನೋಡುತ್ತಿದ್ದೇನೆ. ಅದನ್ನು ಮೂ.ಮಾ.1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ - ಆರೋಪಿ ಹಾಜರಿದ್ದು, ಅವರ ಪರ ವಕೀಲರು ಅವರ ಗೈರು ಹಾಜರಾಗಿದ್ದು ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

**ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**

**ನ್ಯಾಯಾಧೀಶರು ರೋಣ**